ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು).—

ಆ) ಇಲ್ಲ.

ಆ) ಮತ್ತು ಇ) } ಕಾಣೆಯಾದವರ ಕುಟುಂಬದವರಿಗೆ ತಲಾ ರೂ. ೫೦,೦೦೦-೦೦ ಪರಿಹಾರಮಂಜೂರು ಮಾಡಿದೆ. (ಸರ್ಕಾರಿ ಆದೇಶ ಸಂಖ್ಯೆ : ಹೆಚ್‌ಡಿ ೧೨ ಎಸ್‌ಎಸ್‌ಟಿ ೯೩, ದಿನಾಂಕ ೨೨-೩-೧೯೯೨.

ಇಸ್ಪೀಟ್ ಆಟದ ಕುರಿತು

೪೪೩. (೪೫೬) ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಇಸ್ಪೀಟ್ ಆಟ ಒಂದು ಕ್ರೀಡೆ ಎಂದು ಸರ್ಕಾರದಿಂದ ಪರಿಗಣಿಸಲ್ಪಟ್ಟಿದೆಯೇ ?

ಆ) ರಿಕ್ರಿಯೇಶನ್ ಕ್ಲಬ್‌ಗಳಲ್ಲಿ ಇಸ್ಪೀಟ್ ಆಟವನ್ನು ಆಡಲು ಸರ್ಕಾರದವರು ಅನುಮತಿ ನೀಡುವುದು ಇದೊಂದು ಕ್ರೀಡೆ ಎಂಬ ಕಾರಣಕ್ಕಾಗಿಯೇ ?

ಇ) ರಿಕ್ರಿಯೇಷನ್ ಕ್ಲಬ್‌ಗಳಲ್ಲಿಯಲ್ಲಿಯೂ ಸೆಂಚುರಿ ಕ್ಲಬ್‌ಗಳಲ್ಲಿಯೂ ಆಡತಕ್ಕಂತ ಇಸ್ಪೀಟ್ ಆಟದಲ್ಲಿರುವ ವ್ಯತ್ಯಾಸಗಳೇನು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು).—

ಅ) ಇಸ್ಪೀಟ್ ಆಟಗಳಲ್ಲಿ ಒಂದಾದ 'ಬ್ರಿಡ್ಜ್' ಎಂಬ ಆಟಕ್ಕೆ ಮಾನ್ಯತೆ ಇರುತ್ತದೆ.

ಆ) ಇಸ್ಪೀಟ್ ಆಟಗಳಲ್ಲಿ ಒಂದಾದ 'ರಮ್ಮಿ' ಆಡಲು ಪೋಲೀಸ್ ಇಲಾಖೆಯು ಪರವಾನಗಿ ಪಡೆಯುವ ಅವಶ್ಯಕತೆ ಇರುವುದಿಲ್ಲ.

ಇ) 'ರಮ್ಮಿ' ಮತ್ತು 'ಬ್ರಿಡ್ಜ್' ಆಟಗಳನ್ನು ಹೊರತುಪಡಿಸಿ ಬೇರೆ ತರಹದ ಇಸ್ಪೀಟಿನ ಜೂಜಾಟ ಸೆಂಚುರಿ ಕ್ಲಬ್‌ಗಳಲ್ಲಾಗಲೀ ಅಥವಾ ಬೇರೆ ಯಾವ ಕ್ಲಬ್‌ಗಳಲ್ಲಾಗಲಿ. ಆಡುವಂತಿಲ್ಲ. ಅಂತಹ ಜೂಜಾಟ ನಡೆಸಿದ್ದಲ್ಲಿ ಕರ್ನಾಟಕ ಪೋಲೀಸ್ ಕಾಯಿದೆ ಆಡಿಯಲ್ಲಿ ಅಪರಾಧವಾಗುತ್ತದೆ. ಅಂತಹ ಪ್ರಕರಣಗಳು ಕಂಡುಬಂದರೆ ಕಾನೂನಿಗೆ ಅನುಗುಣವಾಗಿ ಕ್ರಮ ತೆಗೆದುಕೊಳ್ಳಲಾಗುತ್ತದೆ.

೧೯೯೩-೯೪ನೇ ಸಾಲಿನಲ್ಲಿ ಹಸಿರು ಕಾರ್ಡಿನ ವಿತರಣೆ

೪೪೪. (೬೧೨) ಶ್ರೀಮತಿ ಸುಮಾವಸಂತ (ವೀರಾಜಪೇಟೆ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ೧೯೯೩-೯೪ನೇ ಸಾಲಿನಲ್ಲಿ ಎಷ್ಟು ಹಸಿರು ಕಾರ್ಡುಗಳನ್ನು ಕರ್ನಾಟಕ ರಾಜ್ಯದಲ್ಲಿ ವಿತರಿಸಲಾಗಿದೆ ?

ಆ) ಕೊಡಗು ಜಿಲ್ಲೆಯಲ್ಲಿ ವಿತರಿಸಲಾದ ಒಟ್ಟು ಹಸಿರು ಕಾರ್ಡುಗಳು ಎಷ್ಟು ? (ತಾಲ್ಲೂಕು ವಾರು ವಿವರ ಕೊಡುವುದು)

ಇ) ಆ ಎಲ್ಲಾ ಕಾರ್ಡುಗಳಿಗೆ ಸಮರ್ಪಕವಾಗಿ ಆಹಾರ ಸಾಮಗ್ರಿಗಳು ವಿತರಣೆಯಾಗುತ್ತಿದೆಯೇ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ಏಪ್ರಿಲ್ ೧೯೯೩ ರಿಂದ ಜನವರಿ ೧೯೯೪ ರವರೆಗೆ ೯,೫೧,೭೭೭ ಶ್ವೇವರ್ಣ ಪಡಿತರ ಚೀಟಿ (ಹಸಿರು) ಗಳನ್ನು ವಿತರಿಸಲಾಗಿದೆ.

ಆ) ೭೬,೫೦೦.

೧)	ಮಡಿಕೇರಿ	೧೧,೫೦೦
೨)	ವೀರಾಜಪೇಟೆ	೫೧,೦೦೦
೩)	ಸೋಮವಾರಪೇಟೆ	೩೪,೦೦೦
	ಒಟ್ಟು :	೭೬,೫೦೦

ಇ) ಹೌದು.